


ವಿಜಯಪುರದ ಕಿರೀಟ
ಗೋಲಗುಮ್ಮಟ

# ಈಗಿದು ಬರದ ಭೂಮಿಯಲ್ಲ

**ಪಂಚನದಿಗಳ ಬೀಡಾಗಿದ್ದರೂ ಬರ ಪ್ರದೇಶಕ್ಕೆ ಹೆಸರಾದ ಬಿಜಾಪುರ ಹಣ್ಣುಗಳ ಬಟ್ಟಲೂ ಹೌದು. ವಿಜಯಪುರ ಜಿಲ್ಲೆ ಹಣ್ಣು, ತೋಟಗಾರಿಕೆ ಬೆಳೆಗಳ ಬೀಜಪುರವಾಗಿಯೂ ಹೆಸರಾಗಿದೆ. ಬಿಜಾಪುರದ ಬಿಳಿ ಜೋಳದ ರೊಟ್ಟಿಯ ಜವಾರಿ ಭಾಷೆಯಲ್ಲಿ ಕಲಾವಿದೆ ಜಯಲಕ್ಷ್ಮಿ ಪಾಟೀಲ ಆ ಊರಿನ ಸೊಗಡನ್ನು ಹಂಚಿಕೊಂಡಿದ್ದಾರೆ.**



‘ಇವತ್ತ ನಿಂಬಿಕಾಯಿ ಆಯ್ಬೇಕು. ಯೋಳೆಂಟು ಡಾಗಾಗುವಷ್ಟು ಹಣ್ಣಿಗೆ ಬಂದಾವ. ಪಂಡಿತ, ನಾಳೆ ಮುಂಜಾನಿ ಆರರ ಲೋಕಲ್ಕ (ಟ್ರೇನ್) ವಿಜಾಪುರಕ್ಕ ಹೋಗಿ ಅಡತಿಗೆ ಹಾಕಿ, ಸಂಜಿ ನಾಕರ ಲೋಕಲ್ಲಿಗೆ ಹೊಡಮಳ್ಳಿ ನಿಂಬಾಳದಾಗಿರ್ಬೇಕ್ ನೀ. ಏ ಹೋಗ್ರಿನ್ನ ಎಲ್ಲಾ ಹುಡುಗೂರು, ಹೋಗಿ ದೊಡ್ಡೋರು ಜತಿಗೆ ಕಾಯಿ ಆಯ್ರಿ’ ಹಿಂಗ ಅವರಾದಿ ಲಕ್ಷ್ಮಣ್ ಮಾಸ್ತರ್ರು ಅಂದ್ರ ನಮ್ಮುತ್ತ್ಯಾ, ಕಟ್ಟಿ ಮ್ಯಾಲೆ ವಿ ಶೇಪಿನ್ಯಾಗ ಕಾಲ್ ಮ್ಯಾಲೆ ಕಾಲ್ ಮಡಚಿ ಹಾಕಿ ಕುಂತು ಹೇಳಿದ್ರ, ಒಲ್ಲ್ಯಾ ಅನ್ನು ಧೈರ್ಯಾ ಚೆಳ್ಳ್ಯಾಪಿಳ್ಳ್ಯಾ ಇದ್ದ ನಾವು ಯಾ ಮೊಮ್ಮಕ್ಕಳಿಗೂ ಇರ್ಲಿಲ್ಲನ್ರಿ.

ಎರಡ್ನೂರ್ ಬಾಳಿಗಿಡ ಇದ್ದ ಪಡಕ್ಕ ಹೋಗ್ರಿ ಅಂದ್ರೂ ಹಿಂಗ ಅಂಜತಿದ್ವಿ. ಯಾಕಂದ್ರ ಅದರ ಒಳಗ ಹೊಕ್ಕರ ಸಾಕು, ಅವು ಎಂಥಾ ಹುಳಾನೋ (ಸೊಳ್ಳೆ) ಏನೋ ಕಡದ್ರ ಮೈಮ್ಯಾಲೆ ನಾಲ್ಕಾಣಿಯಷ್ಟು ಅಗಲ ಗಾದ್ರಿ ಏಳ್ತಿದ್ವು. ನಾವೆಲ್ಲ ತುರಸ್ಕೊಳ್ಳೂದ ತುರಸ್ಕೊಳ್ಳೂದು ಮೈಯೆಲ್ಲಾ. ಆದ್ರ ಮಜಾ ಅಂದ್ರ ನಮ್ಮುತ್ತ್ಯಾರಿಗೆ ಮಾತ್ರ, ಅವ್ರು ಬಾಳಿಪಡದಾಗ ಎಷ್ಟೊತ್ತಿದ್ರೂ ಒಂದಽ ಒಂದು ಹುಳಾನೂ ಕಡಿತಿದ್ದಿಲ್ಲ! ಜವಾರಿ ಬಾಳಿಹಣ್ಣು ನಮ್ಮಲ್ಲಿ. ಹಣ್ಣಾದ್ರ ಹಂಗ ಗಟ್ಟಿಬಂಗಾರ ನೋಡಿದಂಗ ಆಕ್ಕತಿ ಅಂಥಾ ಹಳದಿ ಬಣ್ಣ. ಭಾಳ ರುಚಿ ಖರೇ, ಆದ್ರ ಪಡದ ಒಳಗ ಹೋಗೂದು ಅಂದ್ರ, ಹುಳಾ ಕಡೀದನಽ ಮೈ ತುರಸಾಕ ಚಾಲು ಆಕ್ಕಿತ್ತು! ಆದ್ರ ಅದೇ ಅರಣಿವಟ್ಟಿಗೆ (ದಿಬ್ಬ) ಹೋಗಿ, ಅಲ್ಲಿ ಸಾಽಲ್ಕ ಇದ್ದ ನಾಲ್ವತ್ತು, ಐವತ್ತು ಮಾವಿನಗಿಡ ಕಾಯ್ರಿ ಅಂದ್ರ ನಮಗೆಲ್ಲಾ ಭಾರಿ ಖುಷಿ. ಅದರಾಗ ಅರ್ಧಾ ನಮ್ಮ ದೊಡ್ಡ ಮುತ್ತ್ಯಾರ ಪಾಲಿಗೆ ಹೋಗಿದ್ವು.

ಇಬತ್ತಿ ಮಾವು, ಗುಟ್ಲೆಮಾವು, ಸಬ್ಬಸಿಮಾವು, ಸಕ್ಕ್ರಿಮಾವು, ಕ್ವಾಣ್ಯಾ ಮಾವು, ಚಂದ್ರಮಾವು, ಉಪ್ಪಿನಕಾಯಿ ಮಾವು ಹಿಂಗ ಕನಿಷ್ಟ ಹದಿನೈದು ಇಪ್ಪತ್ತು ವರೈಟಿ ಮಾವಿನ ಹಣ್ಣಿರೊ ಮರಗೊಳವು. ಪಾಡಗಾಯಿ ಬಿದ್ರ ಆಯ್ಕೊಂಡು ತಿನ್ನಬೋದು ಅಂತ ಆಶೆಬುರಕತನಾ. ಅದಕ್ಕ ಅರಣಿಗೆ ಹೋಗ್ರಿ ಅಂದ್ರ ಜಿಕ್ಕೋತ ಹೋಕಿತ್ತು ನಮ್ಮ ಟೋಳಿ. ಆದ್ರ ನಿಂಬಿಬನಾ ಅಂದ್ರ ಅಂಜ್ಕಿ. ಬಾಜಾರದಾಗಿನ ಕಾಯ್ಪಲ್ಲೇದೋರ ಛತ್ರಿ ಹಂಗ, ಇಷ್ಟಗಲ ಹರಡ್ಕೊಂಡು ನಿಂತ ನಿಂಬಿ ಗಿಡಗೊಳ ತುಂಬ ಮುಳ್ಳಽ ಮುಳ್ಳು! ಮುನ್ನೂರು ನಿಂಬಿ ಗಿಡಾ ಇರೊ ಬನದಾಗ ಹಾದು ಹೊರಗ ಬರೂದು ಅಂದ್ರ, ಯುದ್ಧದಾಗಿನ ಬಾಣ ತಪ್ಪಸ್ಕೋತ ತಪ್ಪಸ್ಕೋತ, ಒನ್ನಾಕರ ಮೈ ಕೈಗೆ ಚುಚ್ಚಸ್ಕೊಂಡ ಹೊರಗ ಬಂದಂಗ ಲೆಕ್ಕ! ಕೈ ಕಾಲೆಲ್ಲ ತೆರಚಿ ಚುರುಚುರೂ ಅನ್ನೂವು.

‘ನಿಂಬಿಯ ಬನದ ಮ್ಯಾಗಳ ಚಂದ್ರಮ ಚಂಡಾಡಿದ’ ಅಂತ ಯಾ ಪುಣ್ಯಾತ್ಮರು ಹಾಡ ಕಟ್ಟಿದ್ರೋ, ಯಾಕ ಕಟ್ಟಿದ್ರೋ ಅವ್ರಿಗೇ ಗೊತ್ತು!